ಶ್ರೀ ಎ. ಮಸಿಯಪ್ಪನವರು.—(a) ಪ್ರಶ್ನೆಗೆ ಉತ್ತರವಾಗಿ 5 ಮೇಜರ್ ಅಂದಾಜುಗಳನ್ನು ತಯಾರಿಸಲಾಯಿತು ಎಂದು ಹೇಳಿದ್ದೀರಿ. ಆ ಅಂದಾಜುಗಳು ಯಾವ ಯಾವವು ಎಂಬುದನ್ನು ಹೇಳುತ್ತೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀ ಎ. ಮಸಿಯಪ್ಪನವರು.—ಕೆಲಸ ಮುಂದುವರಿಯುತ್ತಾ ಇದೆ ಎಂದು ಹೇಳಿದ್ದೀರಿ. ಯಾವ ಕಡೆಯಿಂದ ಕೆಲಸ ಪ್ರಾರಂಭ ಮಾಡೋಣಾಯಿತು ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ವೇದಾವತಿ ಬೇಸಿನ್‌ನಲ್ಲಿ ಮಾಡಿರತಕ್ಕ 5 ಅಂದಾಜುಗಳಲ್ಲಿ ಒಂದನ್ನು ತೆಗೆದುಕೊಂಡಿದೆ. ಅದಕ್ಕೆ 13 ಲಕ್ಷ ರೂಪಾಯಿಗಳು ಮಂಜೂರಾಗಿವೆ. ಮತ್ತು 298 ಇರಿಗೇಷ್ ಪಂಪುಗಳಿಗೂ ಕೂಡ ಮಂಜೂರಾಗಿದೆ. ಕೆಲಸ ನಡೆಯುತ್ತಾ ಇದೆ.

ಶ್ರೀ ಎ. ಮಸಿಯಪ್ಪನವರು.—ಅದರಲ್ಲಿ ಯಾವ ಕಡೆಯಿಂದ ಕೆಲಸ ಪ್ರಾರಂಭವಾಗಿದೆ ಎಂದು ನನ್ನ ಪ್ರಶ್ನೆ.

ಶ್ರೀ ಟಿ. ಸಿದ್ದಲಿಂಗಯ್ಯನವರು.—ಏವರ ಹೇಳುವುದಕ್ಕಾಗುವುದಿಲ್ಲ. ಆದರೆ ಈಗ ನಡೆಯುತ್ತಾ ಇರತಕ್ಕ ಕೆಲಸ 13 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ನಡೆಯುತ್ತಾ ಇದೆ.

ಶ್ರೀ ಎ. ಮಸಿಯಪ್ಪನವರು.—ಹಾಗಾದರೆ.....

Mr. SPEAKER.—The Hon'ble Minister need not answer.

ಶ್ರೀ ಎ. ಮಸಿಯಪ್ಪನವರು.—ಹಿರಿಯೂರು ಕಡೆಯಿಂದ ಕೆಲಸ ಪ್ರಾರಂಭವಾಗಿದೆಯೇ ಅಥವಾ ಬೇರೆ ಕಡೆಯಿಂದ ಪ್ರಾರಂಭವಾಗಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀ ಎ. ಮಸಿಯಪ್ಪನವರು.—ಹಿರಿಯೂರಿನಲ್ಲಿ 8 ಪಂಪುಗಳಿಗೆ 2 ಲಕ್ಷ 80 ಸಾವಿರ ರೂಪಾಯಿಗಳು ಮಂಜೂರಾಗಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—298 ಇರಿಗೇಷ್ ಪಂಪುಗಳು ಮತ್ತು 13 ಲಕ್ಷ ರೂಪಾಯಿಗಳ ಒಂದು ಅಂದಾಜು ಮಾತ್ರ ಮಂಜೂರಾಗಿದೆ. ಮಿಕ್ಕದ್ದು ಆಗಿಲ್ಲ.

ಶ್ರೀ ಎ. ಮಸಿಯಪ್ಪನವರು.—ಮುಚ್ಚಳಿಕೆ ಬರೆದು ಕೊಟ್ಟಿದ್ದಾರೆ ಎಂದು ಹೇಳಿದ್ದೀರಿ. ಆರೀತಿ ಮುಚ್ಚಳಿಕೆ ಬರೆದುಕೊಟ್ಟರೆ ವಿದ್ಯುಚ್ಛಕ್ತಿ ಕೊಡುತ್ತೇವೆ ಎಂದು ಹೇಳಿದ್ದೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀ ಎಂ. ಶಂಕರಲಿಂಗೇಗೌಡರು (ನಾಗಮಂಗಲ).—13 ಲಕ್ಷ ರೂಪಾಯಿಗಳಿಗೆ ಎಷ್ಟು ಎಕರೆ ತರೀ ಜಮೀನು ಆಗುತ್ತದೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಗೊತ್ತಿಲ್ಲ.

ಶ್ರೀ ಎಂ. ಶಂಕರಲಿಂಗೇಗೌಡರು.—ಗೊತ್ತಿಲ್ಲವೇ ?

Mr. SPEAKER.—The Hon'ble Minister requires notice.

Industrial School at Chikmagalur.

Q.—449. **Srimathi B. L. SUBBAMMA** (Chikmagalur-Mudigere).—

Will the Government be pleased to state :—

When the Industrial School at Chikmagalur was started ?

A.—**Sri T. SIDDALINGAIYA** (Minister for Industries).—

It was started under a scheme sanctioned in 1915 for the organisation of industrial schools in the State, and was transferred from the control of the Education Department to that of the Industries and Commerce Department in 1922.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—1922 ನೆಯ ಇಸವಿಯಲ್ಲಿ ಈ ಪಾಠಶಾಲೆಯ ಮೇಲನ ಹೆಸೋಟಿಯನ್ನು ವಿದ್ಯಾಭ್ಯಾಸದ ಇಲಾಖೆಯಿಂದ ವಾಣಿಜ್ಯದ ಇಲಾಖೆಗೆ ವರ್ಗಾಯಿಸಲಾಯಿತು ಎಂದು ಹೇಳಿದ್ದೀರಿ. ಈಗ ಬದಲಾವಣೆ ಆಗಿರುವುದು ಏನು ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಒಂದು ಹೊಸ ಸೆಕ್ಷನ್ ಓಪನ್‌ಮಾಡಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಪಾಠಶಾಲೆ ಪ್ರಾರಂಭವಾಗಿ 37 ವರ್ಷವಾದರೂ ಕಟ್ಟಡ ಇಲ್ಲದೇ ಇರುವುದಕ್ಕೆ ಕಾರಣವೇನು ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹಿಂದೆ ಏನು ಕಾರಣ ಇತ್ತೋ ನಮಗೆ ಗೊತ್ತಿಲ್ಲ. ಈಗ ಯಾರೋ ಧರ್ಮಾತ್ಮರು ಕಟ್ಟಡ ಕೊಟ್ಟಿದ್ದಾರೆ ಎಂದು ಕೇಳಿದ್ದೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಧರ್ಮಾತ್ಮರು ಕೊಟ್ಟ ಕಟ್ಟಡದಲ್ಲಿ ಸ್ಕೂಲು ನಡೆಯುತ್ತ ಇಲ್ಲ; ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ ಎಂಬುದು ಗೊತ್ತೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಗೊತ್ತಿದೆ. ಅದನ್ನು ಬೇಗ ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಈ ಸ್ಕೂಲಿನಲ್ಲಿ ಸರಿಯಾದ ಉಪಕರಣಗಳು ಇಲ್ಲ ಎಂಬುದು ಗೊತ್ತೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸ್ಕೂಲುಗಳಿಗೆ ಬೇಕಾಗಿರತಕ್ಕ ಉಪಕರಣಗಳನ್ನು ಸಾಧ್ಯವಾದಷ್ಟೂ ಇದುವರೆಗೂ ಒದಗಿಸಲಾಗಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಹಾಸನದ ಕೈಗಾರಿಕಾ ಸ್ಕೂಲಿನಲ್ಲಿರತಕ್ಕ ಅನೇಕ ಉಪಕರಣಗಳನ್ನು ಬೇರೆ ಕಡೆಗೆ ವರ್ಗಾಯಿಸಿದ್ದಾರೆ ಎಂಬುದು ಗೊತ್ತಿಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಹೀಗೆ ಈ ಸ್ಕೂಲಿನ ವಿಚಾರದಲ್ಲಿ ನಿಗಾ ಕೊಡದೇ ಇರುವುದು ತುಂಬಾ ಅನ್ಯಾಯವಲ್ಲವೇ : ಮಹಿಳೆಯರಿಗೇ ಬೇರೆ ತರಗತಿ ತೆಗೆಯಬೇಕೆಂದು ಎಷ್ಟು ವರ್ಷದಿಂದ ಕೇಳುತ್ತ ಇದ್ದಾರೆ ?

Sri T. SIDDALINGAIYA.—That does not arise out of this question.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಕೈಗಾರಿಕಾ ಸ್ಕೂಲುಗಳ ವಿಚಾರದಲ್ಲಿ ಹೆಚ್ಚು ನಿಗಾ ತೆಗೆದು ಕೊಳ್ಳುತ್ತಿಲ್ಲ ಎಂದು ನಂಬಬಹುದೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಯಾವಾಗಲೂ ನಿಗಾ ತೆಗೆದುಕೊಳ್ಳುವುದೇ ಸರ್ಕಾರದ ಕರ್ತವ್ಯ.